



ಭಕ್ತರಿಗಾಗಿ ತಯಾರಿಸಲಾಗಿದೆ. ಇದರಲ್ಲಿ ಕಲ್ಚರ್ಡ್ ಪರ್ಲ್ (ಮುತ್ತು) ರೆಡ್ ಬೀಡ್ಸ್, ರೆಡ್ ಸ್ಟೋನ್ (ಹರಳು) ಇದೆ. ದುಬಾರಿಯಾಗಿರದೆ ಜನರು ಕೊಂಡುಕೊಳ್ಳುವಂತೆ ತಯಾರು ಮಾಡಲಾಗಿದೆ. ರಾಮಲಲ್ಲಾನ ಚೋಕರ್ ಧರಿಸಿ ಸಂಭ್ರಮಿಸಿ. ಭಗವಂತನ ಅಂಶ ಇರುವ, ವಸ್ತು ಯಾವುದೇ ಆಗಲಿ ನಮಗೊಂದು ಭರವಸೆ ನಾವು ಅದರಲ್ಲಿ ಭಗವಂತನನ್ನು ಕಾಣುತ್ತೇವೆ. ಆತ್ಮಸ್ಥೈರ್ಯ ಹೆಚ್ಚುತ್ತದೆ. ಇದು ಅನುಭವಿಸಿದಾಗ ತಿಳಿಯುತ್ತದೆ.

ಪುರಾಣಗಳಲ್ಲಿಯೂ ಚಿನ್ನದೊಡವೆ ಹೇಗೆ ಪ್ರಾಮುಖ್ಯ ಪಡೆದಿತ್ತು ಎಂಬುದಕ್ಕೆ ಹಲವು ನಿದರ್ಶನಗಳು ಲಭ್ಯ.

ತ್ರೇತಾಯುಗದಲ್ಲಿ ಶ್ರೀರಾಮನ ಧರ್ಮ, ನಿಷ್ಠೆ ಹೇಗೆ ಪ್ರಸಿದ್ಧವಾಯಿತೋ ಹಾಗೇ ಸೀತೆಯನ್ನು ರಾವಣ ಅಶೋಕವನದಲ್ಲಿ ಬಂಧಿಸಿಟ್ಟಿದ್ದ ಅನ್ನೋದು ಸತ್ಯ. ಅಲ್ಲಿ ಸೀತೆಯನ್ನು ರಕ್ಷಣೆ ಮಾಡಲು ಸೀತೆ ಹೇಗಿದ್ದಾಳೆ ಎಂದು ನೋಡಿ ಬಾ ಅಂತ ಹನುಮಂತನನ್ನು ಕಳಿಸಿದ್ದರು. ಭಯದಿಂದ ಇದ್ದ ಸೀತೆಗೆ ಇವನು ವೈರಿ ಆಗಿರಬಹುದು ಅನಿಸಿತು. ಹನುಮಂತನಿಗೋ ಏನು ಮಾಡಿದರೂ ನಾನು ರಾಮನ ಬಂಟ ಅಂತ ನಂಬಿಸಲು ಸಾಧ್ಯವೇ ಆಗಲಿಲ್ಲ. ಕೊನೆಯಲ್ಲಿ ಶ್ರೀರಾಮನ ಮದುವೆ ಉಂಗುರ ತೋರಿಸಿದಾಗ ಸೀತೆಯ ಮುಖ ಸಂತಸದಿಂದ ಅರಳಿದ್ದು, ಅಲ್ಲಿ ಸೀತೆಗೆ ಭರವಸೆ ಬಂದುದು ಹನುಮ ತೋರಿದ ಉಂಗುರದಿಂದಾಗಿ. ಹಾಗಾಗಿ ಬಂಗಾರದ ಉಂಗುರಕ್ಕೆ ಪ್ರಾಧಾನ್ಯತೆ ಬಂತು. ಅಲ್ಲದೆ ರಾಮನಿಗೆ ಹನುಮಂತ ಸೀತೆಯನ್ನು ಭೇಟಿಯಾಗಿದ್ದಾನೆ ಎಂಬ ನಂಬಿಕೆ ಬರಲು ಸೀತೆ ತನ್ನ ತವರಿನಿಂದ ಬಳುವಳಿಯಾಗಿ ಬಂದಿದ್ದ ಚಿನ್ನದ ಚೂಡಾಮಣಿಯನ್ನು ನೀಡುತ್ತಾಳೆ.

ಮಹಾಭಾರತದಲ್ಲಿ ಕರ್ಣನಿಗೆ ದಾನಶೂರ ಅನ್ನೋ ಹೆಸರು ಇರೋದು ವಿಶ್ವವಿಖ್ಯಾತವಾದ ವಿಷಯ. ಹೀಗೆ ಒಂದು ದಿನ ಕರ್ಣ ಸ್ನಾನಕ್ಕೆಂದು ಬಂಗಾರದ ಗಿಂಡಿಯಲ್ಲಿರುವ ಎಣ್ಣೆಯನ್ನು ಹಚ್ಚಿಕೊಳ್ಳುತ್ತಾ ಇದ್ದನು. ಆಗ ಬಂದ ಒಬ್ಬ ಯಾಚಕ (ಬ್ರಾಹ್ಮಣ) 'ಎಷ್ಟು ಸುಂದರವಾಗಿದೆ ಈ ಗಿಂಡಿ, ನನಗೆ ಇದನ್ನು ನೀಡುವೆಯಾ' ಎಂದು ಕೇಳುತ್ತಾನೆ. ಕೂಡಲೇ ಎಡಗೈಯಲ್ಲಿದ್ದ ಗಿಂಡಿಯನ್ನು ಹಾಗೆಯೇ ನೀಡುತ್ತಾನೆ. ಆಗ ಬ್ರಾಹ್ಮಣನು ಎಡಗೈಯಲ್ಲಿ ಯಾರಾದರೂ ದಾನ ಮಾಡುವರೇ, ಇದು ಸರಿಯಲ್ಲ ಎಂದಾಗ ಕರ್ಣನ ಉತ್ತರ ಏನಿರಬಹುದು, ಚಿಂತಿಸಬೇಕು ಅಲ್ಲವೇ? ಕರ್ಣ ತಿಳಿದವ ಬುದ್ಧಿವಂತ ಆದರೂ ಯಾಕೆ ಆ ಕ್ಷಣ ಎಡಗೈಯಲ್ಲೇ ದಾನ ಮಾಡಿದ, ಈ ಬಂಗಾರದ ಗಿಂಡಿ ಕರ್ಣನಿಗೆ ಬಹಳ ಪ್ರಿಯವಾದದ್ದು, ಅಲ್ಲದೆ ಬಲಗೈಯಲ್ಲಿ ಎಣ್ಣೆ ಹಚ್ಚಿಕೊಳ್ಳುತ್ತಿದ್ದುದರಿಂದ ಕೈ ತೊಳೆದು ಬಂದು ಬಲಗೈಗೆ ಹಸ್ತಾಂತರಿಸಿ ಕೊಡುವ ಹೊತ್ತಿಗೆ ಎಲ್ಲಿ ನನ್ನ ಮನಸ್ಸು ಬಾರದೆ ಇದ್ದರೆ ಎಂದು ಎಡಗೈಯಲ್ಲಿರುವಾಗಲೇ ಕೂಡಲೇ ಕೊಟ್ಟೆ ಎಂದ ಕರ್ಣ.



ಹಾಗಾಗಿಯೇ ಇವನಿಗೆ ದಾನ ಶೂರ ಕರ್ಣ ಎಂಬ ಬಿರುದು.

ಕೇವಲ ಒಂದು ಮೂಗುತಿಯಿಂದಾಗಿ ಶ್ರೀನಿವಾಸ ನಾಯ್ಕ ಪುರಂದರದಾಸ ಆದದ್ದು ಬಹಳ ಪ್ರಸಿದ್ಧಿಯನ್ನು ಹೊಂದಿದೆ. ಬಹಳ ಜಿಪುಣನಾಗಿದ್ದ ಇವನು ಹೊಟ್ಟೆ ಬಟ್ಟೆಗೂ ಹಣವನ್ನು ಬಳಸದೆ ಹೆಂಡತಿಗೂ ನೆಮ್ಮದಿ ಕೊಡದೆ ಬದುಕುತ್ತಿದ್ದ. ಒಮ್ಮೆ ಬಡ ಬ್ರಾಹ್ಮಣ ಇವನ ಹೆಂಡತಿಯ ಬಳಿ ಬಂದು ಏನಾದರು ಕೊಡು ಎಂದು ಯಾಚಿಸಿದ್ದಕ್ಕೆ ಯಾವುದು ಕೊಟ್ಟರೂ ಗಂಡನಿಗೆ ತಿಳಿಯುತ್ತದೆ ಎಂದು ತವರಿನಿಂದ ತಂದ ತನ್ನ ಮೂಗುತಿಯನ್ನು ಕೊಡುತ್ತಾಳೆ. ಆ ಮೂಗುತಿಯನ್ನು ವಿಕ್ರಯಿಸಲು ಶ್ರೀನಿವಾಸ ನಾಯ್ಕನ ಬಳಿಗೆ ಹೋಗುತ್ತಾನೆ ಬ್ರಾಹ್ಮಣ. ಮೂಗುತಿಯನ್ನು ಪರೀಕ್ಷಿಸಿದ ಜಿಪುಣನಿಗೆ ಕೂಡಲೇ ತಿಳಿಯುತ್ತದೆ ತನ್ನ ಪತ್ನಿಯದು ಎಂದು. ಮನೆಗೆ ಬಂದು ಹೆಂಡತಿಯನ್ನು ಗದರಿ, ನಿನ್ನ ಮೂಗುತಿ ಎಲ್ಲಿ ಎಂದು ವಿಚಾರಿಸುತ್ತಾನೆ. ಇವನ ಆರ್ಭಟ ತಡೆಯಲಾರದೆ ವಿಷವನ್ನು ಕುಡಿಯಲು ನೋಡುವಾಗ ಮೂಗುತಿ ಬಟ್ಟಲಲ್ಲಿ ಪ್ರತ್ಯಕ್ಷವಾಗುತ್ತದೆ. ಅದನ್ನು ತಂದು ಪತಿಗೆ ಕೊಟ್ಟಾಗ ಶ್ರೀನಿವಾಸ ನಾಯ್ಕ ತನ್ನ ಬಳಿಯಿದ್ದ ಮೂಗುತಿ ಇದರಲ್ಲಿ ಹೇಗೆ ಬಂತು ಎಂದು ಚಕಿತನಾಗುತ್ತಾನೆ. ಹಾಗಾದರೆ ಎರಡು ಮೂಗುತಿಯೇ? ಬಂದ ಬ್ರಾಹ್ಮಣನೆಲ್ಲಿ ಎಂದು ಹುಡುಕುತ್ತಾ ಹೋಗುತ್ತಾನೆ ಅವನೇ ಪಾಂಡುರಂಗ ವಿಠಲ ಎಂದು ತಿಳಿದು ಆನಂತರ ಪುರಂದರ ದಾಸನಾಗುತ್ತಾನೆ. ಇವನ ಪತ್ನಿ ಕೃಷ್ಣನ ಪರಮ ಭಕ್ತೆಯಾದುದರಿಂದ ಕೃಷ್ಣನೇ ತನ್ನ ಭಕ್ತೆಯನ್ನು ಕಾಪಾಡುತ್ತಾನೆ. ಭಕ್ತಿ ಏನನ್ನು ಬೇಕಾದರೂ ಸಾಧಿಸಬಲ್ಲದು.

ಪುರಾಣಕ್ಕೂ ಆಭರಣಕ್ಕೂ ಅವಿನಾಭಾವ ಸಂಬಂಧ; ಅನನ್ಯ ನಂಟು. ಚಿನ್ನದೊಡವೆ ಪುರಾಣ, ಫ್ಯಾಷನ್‌ಗಳೊಂದಿಗೆ, ಒಟ್ಟಿನಲ್ಲಿ ಜನಜೀವನದೊಂದಿಗೆ ಬಿಡಿಸಲಾರದ ಬಾಂಧವ್ಯ ಹೊಂದಿದ್ದು, ಭಾವನಾತ್ಮಕ ನಂಟು ಹೊಂದಿದೆ.